ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 4, September-October 2023, Pp. 101-104
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ಸಿ.ಪಿ.ಸಿದ್ಧಾಶ್ರಮ ಅವರ 101 ಆಧುನಿಕ ವಚನಗಳು: ಸಂತನೊಬ್ಬನ ಮೌನ ಪ್ರತಿಭಟನೆ

**ಡಾ. ಕೆ.ಎಂ. ನಯಾಜ್ ಅಹ್ಮದ್**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ.

***Abstract:***
*ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಹಿರಿಯ ಪ್ರಾಧ್ಯಾಪಕರೂ ಆಗಿರುವ ಡಾ.ಸಿ.ಪಿ.ಸಿದ್ಧಾಶ್ರಮ ಕನ್ನಡ ಸಾಹಿತ್ಯ ಪರಂಪರೆಯ ಓರ್ವ ಗುಪ್ತಗಾಮಿನಿ ಸಾಹಿತಿ. ಭೋರ್ಗರೆಯದೆ ಅತ್ಯಂತ ತೂಕವಾಗಿಯೇ ಹರಿಯುವ ಅಂತರ್ಜಲ. ಹಾಗಾಗಿ ಮೊದಲಿನಿಂದಲೂ ಅವರ ಸಾಹಿತ್ಯಕ ಮೌಲಿಕ ವಿಚಾರಧಾರೆಗಳು, ಆಂತರಿಕ ತುಮಲಗಳು, ರಭಸದಿಂದ ಧುಮ್ಮಿಕ್ಕಿ ಹರಿಯುವ ಅಪಾಯಕಾರಿ ನದಿಯಾಗಿಲ್ಲ. ಬದಲಿಗೆ ಒಡಲಾಳದಲ್ಲಿ ನಾದವಿಲ್ಲದೆ, ಸದ್ದುಗದ್ದಲಗಳಿಲ್ಲದೆ ನಿಶಬ್ಧ ಹನಿಗಳಾಗಿ ಹರಿದು ಮಣ್ಣಿನ ಕಣಕಣಗಳಲ್ಲಿಯೂ ತಾನಾಗಿಬಿಡುವ ಜೀವಜಲವಾಗಿದೆ. ಸಾಹಿತ್ಯ ಕೃತಿಯೊಂದನ್ನು ಕೈಯ್ಯಲ್ಲಿ ಹಿಡಿದುಕೊಂಡು ಆರ್ಭಟಿಸುತ್ತಾ ಸಾಹಿತಿಯ ಸೋಗಿಗೆ ಒಳಗಾಗುವ ಆವೇಶವಾಗಲೀ, ಧಾವಂತವಾಗಲೀ, ಅಥವಾ ಬರವಣಿಗೆಗಾಗಿ ಬರೆಯಲೇಬೇಕೆಂಬ ಅತಿ ಓಟವಾಗಲೀ ಡಾ.ಸಿ.ಪಿ.ಸಿದ್ಧಾಶ್ರಮರವರಲ್ಲಿ ಕಾಣಿಸುವುದಿಲ್ಲ. ಕೃತಿಯ ಮುಂದೆ ಮಾಡಿ 'ಸಾಹಿತ್ಯ ಲಾಭಿ'ಯನ್ನು ನಡೆಸುವ ನಡೆಯೂ ಅವರಲ್ಲಿ ಕಾಣಿಸುವುದಿಲ್ಲ. ಪ್ರಸ್ತುತ ಮೈಸೂರಿನ ಉನ್ನತಿ ಪ್ರಕಾಶನ ಪ್ರಕಟಿಸಿರುವ 'ಸಿ.ಪಿ.ಸಿದ್ಧಾಶ್ರಮ ಅವರ 101 ಆಧುನಿಕ ವಚನಗಳು' ಕೃತಿಯನ್ನು ವಿಮರ್ಶಿಸಲಾಗಿದೆ. ಈ ಕೃತಿಯಲ್ಲಿ ವಿಚಾರ ಹಾಗೂ ವ್ಯವಧಾನ ಎರಡೂ ಇವೆ. ಅನನ್ಯವಾದ ಜೀವನ ಪ್ರೀತಿಯಿದೆ. ಸಮಷ್ಠಿ ಪ್ರಜ್ಞೆಯಿದೆ. ವಿಶಾಲ ಹೃದಯವಿದೆ. ನಿಂತು ನೋಡುವ, ನಿಂತು ಕೇಳುವ ತವಕ, ಸಾತ್ವಿಕ ಗುಣವಿದೆ.*

**Keywords:** *ಸಿ.ಪಿ.ಸಿದ್ಧಾಶ್ರಮ, ಸಿ.ಪಿ.ಎಸ್, 101 ಆಧುನಿಕ ವಚನಗಳು, ಮೌನ ಪ್ರತಿಭಟನೆ.*

## ಪೀಠಿಕೆ

ಡಾ.ಸಿ.ಪಿ.ಸಿದ್ಧಾಶ್ರಮ ಓರ್ವ ಅಪ್ಪಟ ವಿದ್ವಾಂಸರಾಗಿ, ವಿಮರ್ಶಕರಾಗಿ, ಕವಿ–ಸಂಶೋಧಕರಾಗಿ ಸಾಹಿತ್ಯ ವಲಯದಲ್ಲಿ ಪ್ರಮುಖರಾಗುತ್ತಾರೆ. ಇವರದ್ದು ಗಟ್ಟಿ ಹಾಗೂ ಮೌಲಿಕ ಸಾಹಿತ್ಯ. ಇದೇ ಕಾರಣಕ್ಕೆ ಸಿ.ಪಿ.ಎಸ್. ಇಂದಿಗೂ ತಮ್ಮತನವನ್ನು, ಯಾರ ಹಂಗೂ ಆದರಗಳಿಲ್ಲದ ಸ್ವೇಚ್ಛೆಯನ್ನು ಕಾಪಿಟ್ಟುಕೊಂಡು ಬಂದಿದ್ದಾರೆ. ಸಿ.ಪಿ.ಎಸ್.ರವರ "101 ಆಧುನಿಕ ವಚನಗಳು" ಕೃತಿ ಆಧ್ಯಾತ್ಮಿಕ ನೆಲೆಯಿಂದಲೇ ಜನಿಸಿದರೂ ಸಹೃದಯರ ಮನಸ್ಸನ್ನು ಆತ್ಮ ವಿಮರ್ಶೆಗೆ ಒಳಪಡಿಸುವ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಮಾಡಿದೆ. ಇಹ–ಪರ, ಆಲಯ–ಬಯಲುಗಳೆಂಬ ಅತ್ಯಂತ ಸಂಕೀರ್ಣತೆಗಳ ನಡುವೆ ಓಡಾಡಿದರೂ ಆಧುನಿಕ ಸಮಾಜ ಹಾಗೂ ಜಾಗತಿಕ ವಿದ್ಯಮಾನಗಳಿಗೆ ಕೃತಿ ಮುಖಾಮುಖಿಯಾಗಿ ನಿಲ್ಲುತ್ತದೆ. ಮೂಲತಃ 'ವಚನ'ದ ಮೂಲವಿರುವುದು 12ನೆಯ ಶತಮಾನದ ಶರಣರ ಕ್ರಿಯೆ ಮತ್ತು ಕೃತಿಯಲ್ಲಿ. ಸತ್ಯಕ್ಕೆ ಪರ್ಯಾಯವಾಗಿ

***Please cite this article as:*** ನಯಾಜ್ ಅಹ್ಮದ್, ಕೆ.ಎಂ. (2023). ಸಿ.ಪಿ.ಸಿದ್ಧಾಶ್ರಮ ಅವರ 101 ಆಧುನಿಕ ವಚನಗಳು: ಸಂತನೊಬ್ಬನ ಮೌನ ಪ್ರತಿಭಟನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 2(4), 101–104.

ವಚನ ಬಳಕೆಯಾಗಿರುವುದು ವಚನ ಎಂಬುದಕ್ಕೆ ಇರುವ ಮಹತ್ವವನ್ನು ಸಾಕ್ಷೀಕರಿಸುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕೇವಲ ರಾಜಾಶ್ರಯಗಳಲ್ಲಿ ಸಿಂಹಾಸನಾರೂಢವಾಗಿದ್ದ 'ಸಾಹಿತ್ಯ'ಕ್ಕೆ ನಿಜವಾದ ಶುದ್ಧೀಕರಣ ನಡೆದದ್ದು ಶರಣರ ಕಾಲಘಟ್ಟದಲ್ಲಿ. ಸಂಕಲನ ವ್ಯವಕಲನಗಳೆಂಬ ಓಜೆಬಜಾವಣೆಗಳ ಲೆಕ್ಕವನರಿಯದೆ ಬದುಕಿನ ಅನುಭವಗಳ ಆಧಾರದಲ್ಲಿ ನಿಜವಾಗಲೂ ನಡೆಸಿದ ದೇಸಿ ಸಾಹಿತ್ಯ ಕೃಷಿಯ ಬೆಳೆಯೇ ವಚನ. ಸಾಮಾಜಿಕ ಕೆಳಸ್ಥರದ ಬೃಹತ್ ಜನ ಸಮೂಹ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಡೆಸಿದ ಮಹಾಯುದ್ಧದಲ್ಲಿ ದೊರೆತ ಪ್ರತಿಫಲವೇ ವಚನ ಎಂಬುದು ವಾಸ್ತವ ವಿಚಾರ. ಅದರ ಮೂಲ ಆಶಯವೇ ಸಾಮಾಜಿಕ ತುಡಿತ, ನೈತಿಕ ವಿಮರ್ಶೆ, ಆತ್ಮಶೋಧನೆ, ನಿಷ್ಕಲ್ಮಶ ಭಕ್ತಿ, ಬಯಲು ಆಲಯಗಳ ಪರಿಕಲ್ಪನೆಗಳು ಹಾಗೂ ಶೂನ್ಯತ್ವದ ಪ್ರತಿಪಾದನೆ.

ಸಂತ ಮನಸ್ಸಿನ ಡಾ.ಸಿ.ಪಿ.ಎಸ್‌ರವರ 101 ಆಧುನಿಕ ವಚನಗಳು ಕೃತಿಯ ಮೂಲ ಆಶಯವೂ ಇದೇ ಆಗಿದೆ. ವಚನದ ವಿನ್ಯಾಸ, ಕ್ರಮಬದ್ಧತೆ ಹಾಗೂ ಇತರೆ ತಾಂತ್ರಿಕ ಅಂಶಗಳು 12ನೆಯ ಶತಮಾನದ ಶರಣರತ್ತ ವಾಲಿದ್ದರೂ ವಸ್ತು ಹಾಗೂ ನಿರೂಪಣೆಯ ವಿಚಾರದಲ್ಲಿ ಸಧ್ಯದ ಸ್ಥಿತಿಗತಿಗಳನ್ನು ಪ್ರತಿಫಲಿಸುತ್ತದೆ. ಕೃತಿಯು ವೈಚಾರಿಕ, ಸಾಮಾಜಿಕ, ನೈತಿಕ, ರಾಜಕೀಯ, ಶೈಕ್ಷಣಿಕ, ಸ್ತ್ರೀಪರ, ಹಾಗೂ ಆಧ್ಯಾತ್ಮಿಕ ಎಂಬ ಒಟ್ಟು 7 ಎಸಳುಗಳಲ್ಲಿ ಹರಡಿಕೊಂಡಿದೆ. ಆಡಂಬರ, ಅತಿರೇಕ, ಅತಿರಂಜನೀಯ ವಿಚಾರಗಳಿಗೆ ದಾರಿ ಮಾಡಿಕೊಡದೆ ಹೇಳಿಬಿಡಬೇಕೆಂಬ ವಿಚಾರಗಳನ್ನು ನಿರ್ಭಿಡತೆಯಿಂದ ನಿಸ್ಸಂಕೋಚವಾಗಿ ಹೇಳಿ ಮುಗಿಸುವ ಕಾರ್ಯವನ್ನು ಸಿ.ಪಿ.ಎಸ್. ಅಚ್ಚುಕಟ್ಟಾಗಿ ಮಾಡಿ ಮುಗಿಸಿದ್ದಾರೆ.

ನೇರ ನುಡಿಗಳೇ ಈ ಕೃತಿಯ ಜೀವಾಳ ಎಂಬುದು ಇಡೀ ಕೃತಿಯ ಪ್ರತಿ ಎಸಳಿನ ಪ್ರತಿ ವಚನದ ಮೂಲಕ ತೋರಿಸುವ ಕಾರ್ಯವನ್ನು ಸಿ.ಪಿ.ಎಸ್. ಅತ್ಯಂತ ವ್ಯವಸ್ಥಿತವಾಗಿ ಮಾಡಿದ್ದಾರೆ. ಸ್ವಭಾವತಃ ಶಾಂತ ಹಾಗೂ ಸಂತ ಸ್ವಭಾವದವರಾದ ಡಾ.ಸಿ.ಪಿ.ಸಿದ್ಧಾಶ್ರಮ ಈ ಕೃತಿಯಲ್ಲಿ ಹಲವು ಸಂದರ್ಭಗಳಲ್ಲಿ ಉಗ್ರರಾಗುತ್ತಾರೆ. ಘರ್ಜಿಸುತ್ತಾರೆ. ದೇಶ ಮತ್ತು ರಾಜ್ಯದಲ್ಲಿ ಹೆಚ್ಚುತ್ತಿರುವ ರಾಜಕೀಯ ಅಸ್ಥಿರತೆ, ಪ್ರಜಾಪ್ರಭುತ್ವದಲ್ಲಿ ನಡೆಯುತ್ತಿರುವ ಕ್ರೌರ್ಯ, ದೌರ್ಜನ್ಯಗಳು, ದೇಶದ ಅಭಿವೃದ್ಧಿಗೆ ಪೂರಕ ಶಕ್ತಿ ಹಾಗೂ ಭದ್ರ ಬುನಾದಿಯೂ ಆಗಿರುವ ಶ್ರಮಿಕ ವರ್ಗವನ್ನು ದಮನ ಮಾಡುವ ರೀತಿ ನೀತಿಗಳು ಸಹಜವಾಗಿಯೇ ಸಿ.ಪಿ.ಎಸ್. ಅವರನ್ನು ಇಲ್ಲಿ ಕೆರಳುವಂತೆ ಮಾಡಿವೆ. ಶ್ರಮಿಕರ ರಾಜ್ಯ ಉದಯಿಸಬೇಕೆನ್ನುವ ಮಹತ್ವಾಕಾಂಕ್ಷೆಯ ಹಿಂದೆ ವಿಶ್ವ ವಿದ್ಯಾಲಯದ ಒಂದು ಮೂಲೆಯಲ್ಲಿ ತಣ್ಣಗೆ ಕುಳಿತು ಮಾತನಾಡುವ ಕೆಂಪು ಮುಸುಕುಧಾರಿಯೊಬ್ಬ ಅಡಗಿ ಕುಳಿತಿದ್ದಾನೆ.

ಧಾರ್ಮಿಕ ಕೇಂದ್ರಗಳಲ್ಲಿ ಜಾತಿ-ಧರ್ಮಗಳ ಆಧಾರದಲ್ಲಿ ನಡೆಯುತ್ತಿರುವ ಶೋಷಣೆಗಳು, ಸ್ವಜನ ಪಕ್ಷಪಾತ ಧೋರಣೆಗಳನ್ನು ಬಿಡಿಸಿ ಸಹೃದಯ ಮುಂದೆ ಇಡುವ ಪ್ರಯತ್ನ ಮಾಡಲಾಗಿದೆ. ದಯೆಯೇ ಮೂಲವಾಗಿರುವ, ಮಾನವೀಯತೆಯೇ ಮಂತ್ರವಾಗಿರುವ ಧರ್ಮಕಾರಣ ಒಳಿತು ಎಂಬ ಧರ್ಮವನ್ನು ಜಾಗೃತಗೊಳಿಸುವ ಕಾರ್ಯವನ್ನು ಮಾಡಬೇಕು. ರಾಜ್ಯವನ್ನು ಆಳುವ ಕಾರ್ಯ ರಾಜಕಾರಣ ಮಾಡಬೇಕು. ಆದರೆ ಇಂದು ವಿಪರ್ಯಾಸ ಎಂದರೆ ಧರ್ಮಕಾರಣ ರಾಜಕಾರಣ ಮಾಡುತ್ತಿರುವುದು. ಧರ್ಮಗುರುಗಳು ಜಾತಿ ಗುರುಗಳಾಗುತ್ತಿರುವುದು, ಧರ್ಮಗುರುಗಳು ಅದೇ ಧರ್ಮವನ್ನು ತಮ್ಮ ಸ್ವಂತ ಕಾರ್ಯಕ್ಕೆ ನೇರವಾಗಿ ಬಳಸಿಕೊಂಡು ರಾಜಕಾರಣ ಮಾಡಲು ಇಳಿದಿರುವುದು ಇಲ್ಲಿ ವಚನಕಾರನ ಅಸಮಾಧಾನಕ್ಕೆ ಕಾರಣವಾಗಿದೆ.

ಬರಗಾಲದಂತಹಾ ಭೀಕರ ಸನ್ನಿವೇಶದಲ್ಲಿ ಜನರು ಅನ್ನಾಹಾರ, ಗುಟುಕು ನೀರಿಲ್ಲದೆ ಪರದಾಡುವ ಸ್ಥಿತಿಯಲ್ಲಿಯೂ ಬರಗಾಲದ ಬೆಂಕಿಯಲ್ಲಿ, ಬಡವರ ಬಡಬಾಗ್ನಿಯಲ್ಲಿ ಸ್ಕಾಚ್ ವಿಸ್ಕಿ ಜೊತೆ ನಾಲಿಗೆಯ

ರುಚಿಗಾಗಿ ಚಿಕನ್ ಬೇಯಿಸಿಕೊಳ್ಳಲು ಪರಿತಪಿಸುವ ರಾಜಕಾರಣಿಗಳ, ಅಧಿಕಾರಗಳ ಲಾಲಸೆಯ ಬಗ್ಗೆ ಈ ಕವಿ ಸಹಜವಾಗಿ ಅಸಹ್ಯ ಪಟ್ಟುಕೊಳ್ಳುತ್ತಾನೆ. ಜನರ ಶವಗಳನ್ನೂ ಬಿಡದ, ಅದನ್ನೂ ಹಣದಾಸೆಗಾಗಿ ಬಳಸಿಕೊಳ್ಳುವ ಇಂತಹಾ ಹೀನ ಜನರ ಬಗ್ಗೆ ಸಹಜವಾಗಿಯೇ ಕೆಂಡ ಕಾರುತ್ತಾರೆ.

ದೇವಾಲಯ, ಮಸೀದಿ, ಚರ್ಚುಗಳ ಹುಂಡಿಗಳಲ್ಲಿ ಕೊಳೆಯುತ್ತಿರುವ ಸಾವಿರ, ಸಾವಿರ ಕೋಟಿ ಹಣ ಸಮಾಜದ ಅಶಕ್ತರ, ದುರ್ಬಲ ವರ್ಗದ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳ, ದಲಿತ ಸಮುದಾಯಗಳ ಅಭಿವೃದ್ಧಿಗೆ ಬಳಸಬೇಕೆಂಬ ಬಯಕೆಯೂ ಇಲ್ಲಿ ವ್ಯಕ್ತವಾಗುತ್ತಿದೆ. ಇದರೊಂದಿಗೆ ಶತಮಾನಗಳಿಂದ ಮಠ–ದೇವಾಲಯಗಳಲ್ಲಿ ಹುದುಗಿ ಹೋಗಿರುವ ಬೃಹತ್ ಆಲದಂತೆ ಬೆಳೆದುನಿಂತಿರುವ ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಮಡೆಮಡೆ ಸ್ನಾನ, ಎಡೆ ಸ್ನಾನ, ಪಂಕ್ತಿ ಬೇಧ ಮೊದಲಾದವು ತೊಲಗಬೇಕು. ಇದು ಒಂದು ಸ್ವಾಸ್ಥ್ಯ ಸಮಾಜಕ್ಕೆ ಮಾರಕ ಎಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಧಾರ್ಮಿಕ ಕೇಂದ್ರಗಳು ಇಂತಹ ಅನಿಷ್ಟತೆಗಳಿಂದ ದೂರವಾಗಬೇಕೆನ್ನುವ ಅದಮ್ಯ ಬಯಕೆ ಇಲ್ಲಿ ಅನಾವರಣವಾಗುತ್ತದೆ. ಇದನ್ನು ಕವಿಯ ಬಯಕೆ ಎನ್ನುವುದಕ್ಕಿಂತಲೂ ಮಹದಾಸೆ ಎನ್ನಬಹುದಾಗಿದೆ. ಅಂದರೆ ಇಲ್ಲಿ ಸ್ಥಾವರಕ್ಕೆ 'ಧಿಕ್ಕಾರ' ಜಂಗಮತ್ವಕ್ಕೆ 'ಜೈಕಾರ'ವಿದೆ.

ಜಾತಿ ಇಂದು ಸಂಕೀರ್ಣವಾಗಿ ಬೆಳೆಯುತ್ತಾ ಸಾಗುತ್ತಿದೆ. ಜಾತ್ಯತೀತ ತತ್ವಗಳನ್ನು ಬೋಧಿಸುವ, ವ್ಯಕ್ತಪಡಿಸುವ ಬಹಳಷ್ಟು ಜನರು ಆಂತರಿಕವಾಗಿ ಜಾತಿವಾದಿಗಳಾಗಿರುವುದು ಸಾಮಾಜಿಕ ಹಾಗೂ ತಾತ್ವಿಕ ವೈರುಧ್ಯಗಳಿಗೆ ಎಡೆ ಮಾಡಿಕೊಟ್ಟಿದೆ. ಇಂತಹಾ ಅಪಾಯಕಾರಿ ಅಂಶವನ್ನು ಕಟು ಮಾತುಗಳಲ್ಲಿ ಟೀಕಿಸಿಸುವ ಸಿ.ಪಿ.ಎಸ್. ಜಾತಿ ಮತ್ತು ಜಾತ್ಯತೀತತೆಗಳ ನಡುವಿನ ವೈರುಧ್ಯಗಳು ಮತ್ತು ವಿರೋಧಾಭಾಸಗಳನ್ನು ಮನೋಜ್ಞವಾಗಿ ಚಿತ್ರಿಸುವ ಕಾರ್ಯವನ್ನು ಈ ಕೃತಿಯಲ್ಲಿ ಮಾಡುತ್ತಾ ಸಾಗುತ್ತಾರೆ.

ಒಟ್ಟು ಕೃತಿಯಲ್ಲಿ ಡಾ.ಸಿ.ಪಿ.ಎಸ್.ರವರ ಪ್ರತಿಭಟನಾತ್ಮಕ ಮನೋಭಾವ ಅನಾವರಣವಾಗುತ್ತಾ ಹೋಗುತ್ತದೆ. ಈ ಪ್ರತಿಭಟನಾತ್ಮಕ ಮನೋಭಾವನೆ ಶಾಂತ ಸರೋವರದಲ್ಲಿ ಒಮ್ಮೆಲೆ ಸ್ಫೋಟಿಸಿದ ಅನುಭವವನ್ನು ಓದುಗರಿಗೆ ನೀಡುತ್ತದೆ. ಆಧುನಿಕತೆಯ ಅನಿಷ್ಟತೆಗಳ ವಿರುದ್ಧ ಸಿಡಿಸಿದ ಸಿಡಿಮದ್ದಿನ ಕಿಡಿಗಳಾಗಿ ಕಾಣಿಸಿಕೊಳ್ಳುತ್ತವೆ. ಶೋಷಿತರ, ಧ್ವನಿ ರಹಿತರ ನೊಂದವರ ಪಾಲಿಗೆ ವಿಶ್ವವಿದ್ಯಾಲಯದ ಕೋಣೆಯೊಂದರಲ್ಲಿ ಕುಳಿತ ಸಂತ ಪ್ರಾಧ್ಯಾಪಕನೊಬ್ಬ ಮಗುಮ್ಮಾಗಿ ಸುರಿಸಿದ ಕಣ್ಣೀರ ಹನಿಗಳಾಗಿ ಕಾಣಿಸಿಕೊಳ್ಳುತ್ತದೆ. ಅನ್ಯಾಯ, ಅನೀತಿ, ಅಕ್ರಮಗಳ ವಿರುದ್ಧ ಮೌನದಲ್ಲಿಯೇ ಪ್ರತಿಭಟಿಸಿದ 'ಧಿಕ್ಕಾರ'ಗಳ ಕೂಗಾಗಿ ಕೇಳಿಸತೊಡಗುತ್ತದೆ.

ಮೊದಲ ಆರು ಎಸಳುಗಳ ಮೂಲಕ ಪ್ರತಿಭಟಿಸುವ ಕವಿ ಕಡೆಯಲ್ಲಿ ಮೃದುವಾಗುತ್ತಾರೆ. ಆಧ್ಯಾತ್ಮಕ್ಕೆ ಹೊರಳುತ್ತಾರೆ. ಇಹ ಪರ, ಬಯಲು ಆಲಯ, ಶೂನ್ಯ ಎಲ್ಲವೂ ಗಳಿಸಿಕೊಂಡು ಏನಿಲ್ಲದಂತಾಗುವ ಪರಿಯಲ್ಲಿಯೂ "ಲೋಕದ ಹಿತವನ್ನೇ ಬಯಸುವ ತವಕ ಕಾಣಿಸುತ್ತದೆ. ಜಗದ ಕತ್ತಲೆಯ ಕಳೆದು ಬೆಳಗ ಬಾ, ಹರಸ ಬಾ ಹಸುಮಕ್ಕಳನು ಹರಿಗೋಲು ಚಿದಾನಂದ" ಎಂಬ ಸದಾಶಯದೊಂದಿಗೆ ಕೃತಿ ಮುಕ್ತಾಯ ಕಾಣುತ್ತದೆ.

ಜನಹಿತ ಹಾಗೂ ಜನಪರ ನಿಲುವುಗಳ ಆಶಯ, ಆಕಾಂಕ್ಷೆಯ ಪುಟ್ಟ ಹಣತೆ "101 ಆಧುನಿಕ ವಚನಗಳು". ಈ ವಚನಗಳಲ್ಲಿ ವಿಚಾರ ಹಾಗೂ ವ್ಯವಧಾನ ಎರಡೂ ಇವೆ. ಅನನ್ಯವಾದ ಜೀವನ ಪ್ರೀತಿಯಿದೆ. ಸಮಷ್ಠಿ ಪ್ರಜ್ಞೆಯಿದೆ. ವಿಶಾಲ ಹೃದಯವಿದೆ. ನಿಂತು ನೋಡುವ, ನಿಂತು ಕೇಳುವ ತವಕ, ಸಾತ್ವಿಕ ಗುಣವಿದೆ. ಜೀವಾತ್ಮ–ಪರಮಾತ್ಮಗಳು ಇಲ್ಲಿ ಮಾತಿನ ಮೋಡಿಯಾಗದೆ ಮನಸ್ಸಿನ ಸ್ಥಿತಿಯೂ ಆಗಿದೆ. ಮಧ್ಯಕಾಲೀನ ಸಾಹಿತ್ಯ ಸಂದರ್ಭದ ಹಿರಿಯರು ಹರಿಸಿದ ಹೆದ್ದಾರಿಯಲ್ಲಿ ಡಾ.ಸಿ.ಪಿ.ಎಸ್.

ಸಾಗಿದರೂ ಆಧುನಿಕ ಜಗತ್ತಿನ ಪ್ರತಿಯೊಬ್ಬರ ಅಂತರಂಗ ಹಾಗೂ ಬಹಿರಂಗಗಳನ್ನು ವಿಮರ್ಶೆಗೆ ಒಳಪಡಿಸುವ ಕಾರ್ಯ ಮಾಡುವ 101 ಆಧುನಿಕ ವಚನಗಳು ಇದೇ ಕಾರಣಕ್ಕೆ ಮುಖ್ಯವಾಗುತ್ತವೆ.

**ಆಕರ ಗ್ರಂಥ**


- ಸಿದ್ಧಾಶ್ರಮ, ಸಿ.ಪಿ. (2012). *ಸಿ.ಪಿ.ಸಿದ್ಧಾಶ್ರಮ ಅವರ 101 ಆಧುನಿಕ ವಚನಗಳು.* ಉನ್ನತಿ ಪ್ರಕಾಶನ


**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಬರದ. (2011). *ಕನ್ನಡ ಸಾಹಿತ್ಯ ವಿಮರ್ಶೆ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಶಿವಣ್ಣ ಇಜೇರಿ. (2010). *ಆಧುನಿಕ ವಚನಗಳು.* ಕಾಯಕ ಪ್ರಕಾಶನ.
- ತಿಪ್ಪೆಸ್ವಾಮಿ ಜಿ.ಆರ್., ತಿಮ್ಮಯ್ಯ ಕೆ., ಚಂದ್ರಕಾಂತ್ ಕೆ., ಮತ್ತು ಜೆ. ಲೋಹಿತ್. (ಸಂ.). (2015). *ಬಯಲು ಆಲಯ ಪ್ರೊ.ಸಿ.ಪಿ.ಸಿದ್ಧಾಶ್ರಮ ಅವರ ಸಾಹಿತ್ಯ ಸಮಾಲೋಚನೆ.* ಉಷಾ ಪ್ರಕಾಶನ.